ಕಡೆಗಿಟ್ಟುಕೊಂಡಿದ್ದ ಊರುಗೋಲನ್ನು ಎತ್ತಿಕೊಂಡು ಅದರ ಆಸರೆಯಲ್ಲಿ ಮೇಲೆದ್ದು ನಿಂತಳು.

★★★

ಅಂಗಳದಿಂದ ಒಳ ಬಂದ ಬಾಲ್ರಾಜ ಸಣ್ಣದೊಂದು ಜೊಂಪಿಗೊಳಗಾಗಿದ್ದ. ಅಷ್ಟರಲ್ಲಿ ಇದ್ದಕ್ಕಿದ್ದಂತೆ ಡಂ ಡಮಾರ್ ಅನ್ನುವ ಸದ್ದುಗಳು ಇಡೀ ಊರಿನ ನಡುವನ್ನೇ ಹಿಡಿದು ಕುಕ್ಕಿತು. ಅದರ ರಭಸಕ್ಕೆ ಬಾಲ್ರಾಜನಿಗೆ ಚಕ್ಕನೆ ಎಚ್ಚರವಾಗಿ, ಅದಾವ ಸದ್ದು, ಎತ್ತ ಕಡೆಯಿಂದ ಬಂತು ಅನ್ನುವುದೊಂದೂ ತಿಳಿಯದೆ ಕಕರುಮಕರು ಹಿಡಿದವನಂತೆ ನಿದ್ದೆಗಣ್ಣಲ್ಲೇ ಎದ್ದು ಕೂತ. ಅದಾದ ಕೆಲವೇ ಕೆಲವು ಚಣಕ್ಕೆ ಅಂಗಳದಲ್ಲಿ ನಿಂತು ಯಾರೋ ಜೋರಾಗಿ ಕೂಗುತ್ತಿರುವ ಸದ್ದಾಗತೊಡಗಿತು. ಅವ್ಯಕ್ತ ಭಯಕ್ಕೊಳಗಾದ ಬಾಲ್ರಾಜ ದಡದಡನೆ ಒಂದೇ ಉಸುರಿಗೆ ಬಾಗಿಲತ್ತ ನುಗ್ಗಿ ಬಾಗಿಲ ಚಿಲಕಗಳನ್ನು ತೆಗೆಯಲು ಕೈ ಹಾಕಿದರೆ ಅವುಗಳನ್ನಾಗಲೇ ತೆಗೆಯಲಾಗಿತ್ತು. ದಿಗಿಲುಗೊಂಡ ಬಾಲ್ರಾಜ ಪಡಸಾಲೆಯಲ್ಲಿ ಮಲಗಿದ್ದ ಡ್ರೈವರನತ್ತ ನೋಡಿದ. ಅವನಿನ್ನೂ ನಿದ್ದೆಯಲ್ಲಿದ್ದ. ಚಕ್ಕನೆ ತಿರುಗಿ ಸಂಪಕ್ಕಜ್ಜಿ ಮಲಗಿದ್ದ ರೂಮಿನತ್ತ ಹೋಗಿ ನಡುಮನೆಯ ಲೈಟ್ ಹಾಕಿದ. ರೂಮಿನ ಬಾಗಿಲು ಅರೆ ತೆರೆದುಕೊಂಡಿತ್ತು. ಹತ್ತಿರ ಹೋಗಿ ಹಂಗೇ ಇಣುಕಾಕಿದ. ಮಂಚದ ಮೇಲೆ ಮುದುರಿ ಗುಪ್ಪೆಯಂತೆ ಕಾಣುತ್ತಿದ್ದ ಸಂಪಕ್ಕಜ್ಜಿ ಹೊದ್ದಿದ್ದ ರಗ್ಗಷ್ಟೇ ಕಂಡಿತು. ಮತ್ತೂ ದಿಗಿಲಿಗೊಳಗಾದ ಬಾಲ್ರಾಜ, 'ಅವ್ವಾ ಅವ್ವಾ' ಅಂತ ಕೂಗತ್ತಾ ಮನೆಯಗಲಕೂ ಓಡಾಡಿದ. ಅವ್ವ ಓಗೊಡಲಿಲ್ಲ. 'ಬಾಲೂ ಬಾಲ್ರಾಜಾ,' ಹೊರಗೆ ಕೂಗಿಕೊಳ್ಳುತ್ತಿದ್ದವರ ಸದ್ದು ಕ್ಷಣಕ್ಷಣಕ್ಕೂ ಇಮ್ಮಡಿಸುತ್ತಿತ್ತು.

ಬಾಲ್ರಾಜ ಮತ್ತೆ ಬಾಗಿಲ ಹತ್ತಿರ ಬರುವಷ್ಟರಲ್ಲಿ ಡ್ರೈವರ್ ಎದ್ದು ಕೂತಿದ್ದ. ಬಾಗಿಲನ್ನು ತೆರೆಯುತ್ತಿದ್ದಂತೆ ಹಿಂದೆಯೇ ಒಳ ನುಗ್ಗಿದ ಪಂಚ್ಲಿಂಗಪ್ಪ, 'ಎಲಾ ಮಗಾ ಆ ಕೊಡ್ಗಲ್ಗೆ ಡೈನಾಮೆಂಟ್ ಇಟ್ಟು ಪೂರಾ ಪುಡಿ ಪುಡಿ ಮಾಡಾಕವ್ರೆ, ಕಲ್ಲಿನ್ ಬೋರ್ಡುನ್ನೂ ಕೆಡ್ವಿ ತುಂಡ್ ತುಂಡ್ ಮಾಡಾಕವ್ರೆ,' ಒಂದೇ ಉಸುರಿಗೆ ಅಂದವನೇ ಉಸಿರುಗಟ್ಟಿದವನಂತೆ ಗೋಡೆಗೊರಗಿ ಕುಕ್ಕುರುಗಾಲಲ್ಲಿ ಕೂತು ಎರಡೂ ಕೈಗಳ ಮೇಲೆ ತಲೆ ಆನಿಸಿದ. 'ಹಂಗೇ ನಿಮ್ಮವ್ವನ್ಗೆ... ಡೈನಾಮೆಂಟ್ ಕಲ್ಲಿನ್ ಚೂರು ತಗ್ಲಿ...' ಮುಂದಕ್ಕೆ ಮಾತುಗಳುಟ್ಟದೆ ಕೂತಲ್ಲಿಂದಲೇ ಪಂಚ್ಲಿಂಗಪ್ಪನ ಬಿಕ್ಕಳಿಕೆಗಳು ಎದ್ದಾಡಿದವು. ಆ ಮಾತುಗಳನ್ನು ಕೇಳುತ್ತಲೇ ಬಾಲ್ರಾಜನಿಗೆ ಮೈಯ್ಯಂಥ ಮೈಯ್ಯೆಲ್ಲಾ ತಣ್ಣಗಾಗುತ್ತಿರುವಂಥ ಅನುಭವವಾಗುತ್ತಾ ಮರಗಟ್ಟತೊಡಗಿತು. ಮಾತಿಲ್ಲದೆ ಅಂಗಳಕ್ಕೆ ನಡೆದ. ಮಾಗಿ ಕಾಲದ ಇಬ್ಬನಿಯೊಂದಿಗೆ ಚಳಿಗಾಳಿ ಅಡ್ಡಾಡುತ್ತಿತ್ತು. ಅಂಗಳದ ಮತ್ತೊಂದು ತುದಿಗೋಗಿ ನಿಂತು ಉದ್ವೇಗದ ಉಬ್ಬಸವನ್ನು ಹತ್ತಿಕ್ಕಲಾಗದೆ ಬಿಕ್ಕಳಿಸುತ್ತಾ ಮುಗಿಲತ್ತ ಮುಖ ಮಾಡಿದ ಬಾಲ್ರಾಜನ ನಿಸ್ತೇಜ ಕಣ್ಣುಗಳೊಳಗೆ ಗೂಡ್ರುಗಟ್ಟಿಕೊಂಡಿದ್ದ ಮುಗಿಲಲ್ಲಿ ಇರುಳೆಲ್ಲಾ ನಡೆದು ದಣಿದಿದ್ದ ಚಂದ್ರನ ಕಳೇಬರ ಕವುಕೊಳ್ಳುತ್ತಿತ್ತು.


## ಎಸ್. ಗಂಗಾಧರಯ್ಯ

ಕತೆಗಾರ ಮತ್ತು ಅನುವಾದಕ ಗಂಗಾಧರಯ್ಯ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮಾಕುವಳ್ಳಿಯವರು. ಅದೇ ತಾಲ್ಲೂಕಿನ ಮತಿಘಟ್ಟದ ಜಯಭಾರತಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 'ನವಿಲ ನೆಲ', 'ಒಂದು ಉದ್ದನೆಯ ನೆರಳು', 'ದೇವರ ಕುದುರೆ' ಅವರ ಪ್ರಕಟಿತ ಕಥಾಸಂಗ್ರಹಗಳು. ಅನೇಕ ಕೃತಿಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಪ್ರಸ್ತುತ ತಿಪಟೂರಿನಲ್ಲಿ ವಾಸ.